"ನೀವು ಆ ಹಳೇ ಚಾಳಿ ಬಿಡಲಿಲ್ಲ. ಇಸ್ಪೀಟು ಸಾರ್... ಇವರ ದುರಭ್ಯಾಸ. ಅದಿಕ್ಕೆ ಇವ್ರಿಗೆ ನಾನು ಹಣ ಕೊಡ್ತಾನೆ ಇರಲಿಲ್ಲ. ಒಂದು ವರ್ಷದಿಂದ ಕಮ್ಮಿಯಾಗಿತ್ತದು. ಕೆಲ ದಿವಸಗಳ ಹಿಂದೆ ಅನುಮಾನ ಬಂದಿತ್ತು... ತಡವಾಗಿ ಬರ್ತಾ ಇದ್ರು." ದೇಚಮ್ಮ ಚೀರಿದಳು.

"ಈಗ ಕುಪ್ಪಂಡ ವೇಣು ಹಣ ಕೇಳ್ಬಹುದು ಅಂತ ಭಯವಾಗಿದೆಯಲ್ವೆ?" ಕರಮಚಂದನ ಮಾತಿಗೆ ಓಂಕಾರಯ್ಯ ಹೂಂಗುಟ್ಟಿದ.

ಕರಮಚಂದ ಚೀಲದಲ್ಲಿದ್ದ ಕವರ್ ತೆಗೆದು, ತುಸು ನೀರು ತಾಗಿಸಿ, ಅದನ್ನು ಮೆಲ್ಲಗೆ ತೆರೆದ. ಅದರೊಳಗೆ ಒಂದು ಕಾಗದವಿತ್ತು... ಆದರೆ ಖಾಲಿ! ನಂತರ ದೇಚಮ್ಮನನ್ನು ಪ್ರಶ್ನಿಸಿದ,

"ಆ ದಿವಸ ಬಂದ ವ್ಯಕ್ತಿಯನ್ನು ಗುರುತಿಸಬಲ್ಲಿರಾ?"

"ಮುದುಕ. ಬಿಳಿ ಗಡ್ಡ, ಮೀಸೆ... ತಲೆಗೆ ಟೊಪ್ಪಿ ಹಾಕಿಕೊಂಡಿದ್ದ."

"ಓಂಕಾರಯ್ಯ, ಒಬ್ಬ ಅಪರಿಚಿತನಿಂದ ಚೀಲ ಪಡೆದು, ಅದನ್ನ ಯಾರಿಗೋ ಕೊಡಲು ಯಾಕೆ ಒಪ್ಪಿಕೊಂಡಿರಿ?" ಇರಿಯುವಂತೆ ಓಂಕಾರಯ್ಯನನ್ನು ದಿಟ್ಟಿಸಿದ ಕರಮಚಂದ. ಉಗುಳು ನುಂಗಿಕೊಂಡ ಓಂಕಾರಯ್ಯ ಮೆಲ್ಲಗೆ ನುಡಿದ,

"ಅದಿಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟಿದ್ದ ಮೇದಪ್ಪ."

"ಸದ್ಯಕ್ಕೆ ನಾವಿಲ್ಲಿ ಮಾಡುವಂತಹದೇನೂ ಇಲ್ಲ. ನೀವು ಚಿಂತೆ ಮಾಡ್ಬೇಡಿ. ಈ ಸಮಸ್ಯೆನ ನಾವು ಬಗೆಹರಿಸ್ತೇವೆ." ಹೊರಡಲನುವಾದಂತೆ ಕರಮಚಂದ ಎದ್ದು ನಿಂತ.

★★★

ಆ ರಾತ್ರಿ ಬಹಳ ಹೊತ್ತು ಕರಮಚಂದ ಗಣಕಯಂತ್ರದ ಮುಂದೆ ಕುಳಿತು ಏನೋ ಹುಡುಕಾಡುತ್ತಿದ್ದ. ಆತ 'ಪೂರ್ವಾಪರ' ತಂತ್ರಾಂಶದಲ್ಲಿ ತಲಾಶು ಮಾಡುತ್ತಿದ್ದಾನೆಂದು ನಾನು ಊಹಿಸಿದೆ. ಅದೊಂದು ಡಾಟಾಬೇಸ್. ಅದರಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಬಂದ ಸುದ್ದಿಗಳು ಮತ್ತಿತರ ಮಾಹಿತಿಗಳಿದ್ದವು. ಮರುದಿನ ಉಪಹಾರದ ವೇಳೆಯಲ್ಲಿ ನಾನು ಪ್ರಶ್ನಿಸಿದೆ,

"ಮೇದಪ್ಪ ಆ ಚೀಲದಲ್ಲಿ ಹಣ ಇರಿಸಿದ್ದಾನೆಂದು ಹೇಗೆ ಊಹಿಸಿದೆ?"

ಕರಮಚಂದ ಉಪ್ಪಿಟ್ಟನ್ನು ಬಾಯಿಗಿರಿಸುತ್ತಾ ಉಸುರಿದ,

"ಓಂಕಾರಯ್ಯನ ಹೆದರಿಕೆ! ಅದೇ ನನ್ಗೆ ಸೂಚನೆ ಕೊಟ್ಟಿತು. ಆ ಚೀಲದಲ್ಲಿದ್ದ ಪೇಪರ್ ವೆಯಿಟ್ ಕಾಣೆಯಾಗಿದೆ ಅಂತ ಅವ್ನು ಹೇಳ್ದ. ಅದು ನಕ್ಷತ್ರ ಜ್ಯುವೆಲ್ಲರಿಯವರ ಪೇಪರ್ ವೆಯಿಟ್. ಅದು ವಿರಾಜಪೇಟೆಯಲ್ಲಿರೋ ದೊಡ್ಡ ಷೋರೂಮು. ಅಲ್ಲಿಗೆ ಹೋಗಿ, ಕೇಳಿದ್ರೆ, ಅವರೊಂದು ಅಂತಹಾ ಪೇಪರ್ ವೆಯಿಟ್ ಖಂಡಿತಾ ಕೊಡ್ತಾರೆ. ಅದಿಕ್ಕೆ ಹೆದರೋದು ಯಾಕೆ? ಓಂಕಾರಯ್ಯ ಅಷ್ಟೊಂದು ಸ್ಥಿತಿವಂತನೇನೂ ಅಲ್ಲ. ಹಾಗಾಗಿ ಅವ್ನು ಹೆದರಬೇಕಾದ್ರೆ ಹಣದ ವಿಷಯವೇ ಇರಬೇಕೆಂದು ಊಹಿಸಿದೆ." ಕರಮಚಂದನ ವಾದ ಸರಣಿ ತರ್ಕಬದ್ಧವಾಗಿತ್ತು.

"ಬಿದ್ದಪ್ಪ, ನಿನಗೇನಾದರೂ ಊಹನೆ ಮಾಡಲಿಕ್ಕೆ ಸಾಧ್ಯವಾಗಿದೆಯೆ?"

"ಹೂಂ. ಈ ಮೇದಪ್ಪ ಪಿಕ್ ಪಾಕೆಟ್ ತಂಡದ ಒಬ್ಬ ಸದಸ್ಯ. ಬಸ್ ನಿಲ್ದಾಣದಲ್ಲಿ ಆ ತಂಡ ಕಾರ್ಯಾಚರಣೆ ನಡೆಸ್ತಿದ್ದಿರಬೇಕು. ಆ ದಿವ್ಸ ಅವ್ನು ಓಂಕಾರಯ್ಯನೊಂದಿಗಿದ್ದಾಗ ಪೊಲೀಸರು ಬಂದಿದ್ದನ್ನು ಕಂಡಿದ್ದಾನೆ. ಪಿಕ್‌ಪಾಕೆಟ್ ಮಾಡಿದ ಚೀಲ ಆತನ ಕೈಯಲ್ಲೇ ಇದ್ದಿರಬೇಕು. ಆತನಿಗೆ ಭಯವಾಗಿದೆ. ಪೊಲೀಸರಿಗೆ ತನ್ನ ಗುರುತು ಸಿಗಬಹುದಂತ ಆತ ಭಾವಿಸಿರಬೇಕು. ಹಾಗಾಗಿ ಆತ ಹಳೇ ಅಪರಾಧಿ ಅಂತ ಊಹಿಸಬಹುದು. ಆತನಿಗೆ ತನ್ನ ಮಿತ್ರನಿಗೆ ಹಣ ಪಾವತಿಸೋದು ಇತ್ತು. ಅದಕ್ಕೆ ಅವ್ನು ಓಂಕಾರಯ್ಯನನ್ನು ಬಳಸಿಕೊಂಡ. ಅದರಿಂದ ಆತನಿಗೊಂದು ಲಾಭವೂ ಇರಬಹುದು. ಓಂಕಾರಯ್ಯನಲ್ಲಿ ಕಡಿಮೆ ಹಣ ನೀಡಿ, ಮಿತ್ರನಲ್ಲಿ ಜಾಸ್ತಿ ಮೊತ್ತವನ್ನು ಹೇಳುವುದು ನಂತರ,